2018ರಲ್ಲಿ ಕೊಡಗಿನಲ್ಲಿ ಸಂಭವಿಸಿದ ಭಾರೀ ಭೂ ಕುಸಿತದ ಬಳಿಕ ಪಶ್ಚಿಮ ಘಟ್ಟದ ವಿವಿಧೆಡೆಗಳಲ್ಲಿ ಭೂಮಿ ಕುಸಿಯುವ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ಸುರಿಯುವ ಮಳೆ ಬೆಟ್ಟಗುಡ್ಡಗಳನ್ನು ಸಪಾಟಾಗಿಸಿದ ದುರ್ಘಟನೆಗಳು ನಡೆಯುತ್ತಿವೆ. ಕೊಡಗಿನೊಂದಿಗೆ, ಉತ್ತರ ಕನ್ನಡ, ದಕ್ಷಿಣ ಕನ್ನಡದ ಕೆಲವು ಪ್ರದೇಶಗಳೂ ಪ್ರವಾಹ ಹಾಗೂ ಭೂಕುಸಿತದ ದುರಂತಗಳನ್ನು ಎದುರಿಸಿವೆ. ದಕ್ಷಿಣ ಕನ್ನಡದ ಹಲವು ಪ್ರದೇಶಗಳ ಗುಡ್ಡಗಳ ಅಡಿಪಾಯಗಳು ಸಡಿಲಗೊಂಡಿರುವುದನ್ನು ಇತ್ತೀಚಿನ ಮಳೆಗಾಲಗಳು ಸಾಬೀತುಪಡಿಸಿವೆ. ನದಿಮೂಲಗಳ ಪಾತ್ರ ವ್ಯತ್ಯಯವಾಗಿರುವುದು, ತೋಡುಗಳ ಗಾತ್ರ ವಿಸ್ತರಿಸಿರುವುದು, ಕೃಷಿಭೂಮಿಯ ಚಹರೆ ನಾಶವಾಗಿರುವುದು – ಇವೆಲ್ಲ, ಪ್ರಕೃತಿ ಮತ್ತು ಮನುಷ್ಯನ ಸಂಬಂಧ ಹದಗೆಡುತ್ತಿರುವುದರ ಪ್ರತಿಫಲವೇ ಆಗಿವೆ. ದಕ್ಷಿಣ ಕನ್ನಡವನ್ನು ಕೇಂದ್ರವಾಗಿಟ್ಟುಕೊಂಡು, ಪಶ್ಚಿಮ ಘಟ್ಟಗಳ ಸಂರಕ್ಷಣೆಯ ಕುರಿತು ಮಾತನಾಡುವ 'ಸುಧಾ'ದ ಈ ವಿಶ್ಲೇಷಣೆ, ಕೃಷಿ ಭೂಮಿ ಕಳೆದುಕೊಂಡವರ ದುಃಖದೊಂದಿಗೆ, ಭೂಕುಸಿತ ಮುಂದುವರಿದರೆ ಗತಿಯೇನು ಎನ್ನುವ ಆತಂಕವನ್ನು ಸಹೃದಯರು ಮತ್ತು ಸರ್ಕಾರದ ಗಮನಕ್ಕೆ ತರುವ ಪ್ರಯತ್ನ.

**■ ಕೋಡಿಬೆಟ್ಟು ರಾಜಲಕ್ಷ್ಮಿ**



ಹಿಜ್ಜನಹಳ್ಳಿ ಗ್ರಾಮದ ಸಮೀಪ
ಕುಸಿದಿರುವ ಭೂಮಿ